# ಭಾರತದ ಮಾಂತ್ರಿಕ ಜಲಪಾತ ಕ್ರಾಂಗ್ ಶೂರಿ

■ ಸಂತೋಷ್ ರಾವ್ ಪೆರ್ಮುಡ

ಈಶಾನ್ಯ ಭಾರತ ಪ್ರಮುಖ ಪ್ರವಾಸಿ ತಾಣಗಳ ಪೈಕಿ ಮೇಘಾಲಯಕ್ಕೆ ಭೌಗೋಳಿಕ ಗುಣಲಕ್ಷಣಗಳಿಂದಾಗಿ ಮಹತ್ವದ ಸ್ಥಾನವಿದೆ. ಬೆಟ್ಟಗುಡ್ಡ ಗಿರಿ ಕಂದಕಗಳಿಂದ ಕೂಡಿದ ಮೇಘಾಲಯದ ಪ್ರಭಾವಳಿಯಂತೆ ಭಾಸವಾಗುವ ಕ್ರಾಂಗ್ ಶೂರಿ ಜಲಪಾತ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ. ಈ ಜಲಪಾತವು ಪಶ್ಚಿಮ ಜೈಂಟಿಯಾ ಹಿಲ್ಸ್ ಜಿಲ್ಲೆಯ ಜೋವಾಯ್‌ನಿಂದ ಸುಮಾರು 30 ಕಿ.ಮೀ ದೂರದಲ್ಲಿದೆ.

ಕ್ರಾಂಗ್ ಶೂರಿ ಜಲಪಾತವನ್ನು ತಲುಪ ಬೇಕಾದರೆ ಪ್ರವಾಸಿಗರು ಕಾಡಿನ ಹಾದಿಯಲ್ಲಿ ಜಾರುವ ಕಲ್ಲುಗಳ ಮೆಟ್ಟಿಲುಗಳ ಮೂಲಕ ಹೋಗಬೇಕು. ಕಾಲುಹಾದಿಯ ಮೂಲಕ ಸಾಗಿದಾಗ ದೈತ್ಯ ಜಲಪಾತದ ಮೇಲ್ಭಾಗದ ನೋಟವನ್ನು ಸಮೀಪದಿಂದ ಕಣ್ತುಂಬಿಕೊಳ್ಳಬಹುದು. ಅಲ್ಲಿ ಧುಮುಕುವ ನೀರು ಸ್ಫಟಿಕದಷ್ಟು ಶುಭ್ರ. ದೂರದಿಂದ ನೋಡಿದರೆ ರೇಷ್ಮೆಯ ನೂಲಿನಂತೆ ಕಾಣಿಸುವ ಕಿರು ಜಲಪಾತಗಳು ಈ ಜಲಪಾತದ ಸುತ್ತಲೂ ಬಹಳಷ್ಟು ಕಾಣಸಿಗುತ್ತವೆ.

ಕ್ರಾಂಗ್ ಶೂರಿ ಜಲಪಾತವು ಬೇಸಿಗೆಯಲ್ಲಿ ಭೇಟಿ ನೀಡಬಹುದಾದ ಪ್ರವಾಸಿ ತಾಣವಾಗಿದೆ. ಮೇಲಿನಿಂದ ಧುಮುಕುವ ನೀರು ದೂರದಿಂದ ನೋಡಿದಾಗ ರೇಷ್ಮೆಯ ನೂಲುಗಳನ್ನು ಜಲಪಾತದಿಂದ ಕೆಳಕ್ಕೆ ಇಳಿಯಬಿಟ್ಟಂತೆ ಕಾಣಿಸುತ್ತದೆ. ಜಲಪಾತದ ಕೆಳಭಾಗದ ಆಳವಾದ ಕೊಳದಲ್ಲಿ ಸಂಗ್ರಹವಾಗುವ ನೀರಿನ ಬಣ್ಣವು ತಾಮ್ರದ ಸಲ್ಫೇಟ್‌ನ ನೀಲಿ ಬಣ್ಣದಂತೆ (ಮೈಲುತುತ್ತಿನ ಬಣ್ಣ) ಕಾಣಿಸುತ್ತದೆ.

ಮೇಘಾಲಯದ ಈ ಜಲಪಾತವು ಭಾರತದ ಮಾಂತ್ರಿಕ ಜಲಪಾತವೆಂದೇ ಹೆಸರಾಗಿದೆ. ಜಲಪಾತದ ಹೊಳೆಯುವ ನೀಲಿ ಬಣ್ಣದ ನೀರು ಮತ್ತು ಸೂರ್ಯನ ರಶ್ಮಿಗಳಿಂದ ಜಲಪಾತದ ಸುತ್ತಲೂ ಕೆಲವೊಮ್ಮೆ ರೂಪುಗೊಳ್ಳುವ ಮಳೆಬಿಲ್ಲು ನೋಡುಗರನ್ನು ಮಾಂತ್ರಿಕಲೋಕಕ್ಕೆ ಕರೆದೊಯ್ಯುತ್ತವೆ.

ಮೇಘಾಲಯವು ಬೆಟ್ಟಗುಡ್ಡಗಳನ್ನು ಪ್ರೀತಿಸುವವರಿಗೆ ಕನಸಿನ ತಾಣ. ಮೇಘಾಲಯದ ಭೂಭಾಗವನ್ನು ಮೂರು ಮುಖ್ಯ ಬೆಟ್ಟಗಳಾಗಿ ವಿಂಗಡಿಸಲಾಗಿದ್ದು, ಅವುಗಳನ್ನು ಖಾಸಿ ಹಿಲ್ಸ್ (ಮಧ್ಯ), ಗಾರೊ ಹಿಲ್ಸ್ (ಪಶ್ಚಿಮ ಶ್ರೇಣಿ) ಮತ್ತು ಜೈನ್ತಿಯಾ ಹಿಲ್ಸ್ (ಪೂರ್ವ ಶ್ರೇಣಿ) ಎಂದು ಹೆಸರಿಸಲಾಗಿದೆ. ಇಲ್ಲಿನ ಸ್ಥಳೀಯ ಭಾಷೆ ಖಾಸಿ. ಪ್ರದೇಶಕ್ಕನುಗುಣವಾಗಿ ಉಪಭಾಷೆಗಳೂ ಬಳಕೆಯಲ್ಲಿವೆ.

ಕ್ರಾಂಗ್‌ಶೂರಿ ಜಲಪಾತವು ಶಿಲ್ಲಾಂಗ್‌ನಿಂದ 91 ಕಿ.ಮೀ ದೂರದಲ್ಲಿದೆ. ರಸ್ತೆಯು ಸಂಪೂರ್ಣ ಅಂಕುಡೊಂಕಾದ ಘಾಟ್ ರಸ್ತೆಯಾಗಿದ್ದು, ಸಾಮಾನ್ಯ ರಸ್ತೆ ಪ್ರಯಾಣಕ್ಕಿಂತ ಹೆಚ್ಚುವರಿ ಸಮಯ ತೆಗೆದುಕೊಳ್ಳುತ್ತದೆ. ರಸ್ತೆಯುದ್ದಕ್ಕೂ ಕೆಲವು ಸಣ್ಣ ಹಳ್ಳಿಗಳು ಮತ್ತು ಸುಣ್ಣದ ಕಲ್ಲುಗಣಿಗಳನ್ನು ಹೊರತುಪಡಿಸಿದರೆ ಬೇರೇನೂ ನೋಡಲು ಸಿಗುವುದಿಲ್ಲ.

ಜಲಪಾತದಲ್ಲಿ ಪ್ರವಾಸಿಗರು ಕೆಲವೊಂದು ಅಪಾಯವಲ್ಲದ ನಿರ್ದಿಷ್ಟ ಸ್ಥಳಗಳಲ್ಲಿ ಈಜಾಡಲು ಅವಕಾಶವಿದೆ. ಅಲ್ಲಿ ಈಜಾಡುವವರಿಗೆ ಲೈಫ್ ಜಾಕೆಟ್ ತೊಡಿಸುತ್ತಾರೆ ಮತ್ತು ಪ್ರವಾಸಿಗರು ಯಾವ ಸ್ಥಳಗಳಲ್ಲಿ ಈಜಲಿಕ್ಕೆ ಅವಕಾಶವಿದೆಯೆಂದು ಸ್ಥಳೀಯ ಗೈಡ್‌ಗಳು ಮಾರ್ಗದರ್ಶನ ಮಾಡುತ್ತಾರೆ. ಜಲಪಾತದ ಬುಡದವರೆಗೂ ಈಜಾಡುತ್ತಾ ಹೋಗಬಹುದಾಗಿದ್ದು, ಜಲಪಾತದ ನೀರಿಗೆ ತಲೆಯೊಡ್ಡಿ ಕುಳಿತುಕೊಂಡು ವಿಭಿನ್ನ ಅನುಭವವನ್ನು ಪಡೆಯಬಹುದು.

ಮಳೆಗಾಲದಿಂದ ಚಳಿಗಾಲದವರೆಗೆ ಯಾವುದೇ ಸಮಯದಲ್ಲಿ ಕ್ರಾಂಗ್ ಶೂರಿಗೆ ಭೇಟಿ ಮಾಡಬಹುದು. ಕ್ರಾಂಗ್ ಶೂರಿಗೆ ಭೇಟಿ ನೀಡಿದ ನಂತರ, ಬಾಂಗ್ಲಾದೇಶದ ಗಡಿಯಲ್ಲಿರುವ ಡಾಕಿ ಶೊನೊಂಗ್‌ಡೆಂಗ್‌ಗೆ ತೆರಳಬಹುದು. ಅಲ್ಲಿ ಅತ್ಯಂತ ಸ್ವಚ್ಛವಾಗಿರುವ ಉಮ್ ಗೋಟ್ ಎಂಬ ನದಿ ಹರಿಯುತ್ತದೆ. ಆ ನದಿಯಲ್ಲಿ ಸಣ್ಣ ಸಣ್ಣ ದೋಣಿಗಳಲ್ಲಿ ಪ್ರವಾಸಿಗರು ಬೋಟಿಂಗ್ ಮಾಡುತ್ತಾ ಸಮಯವನ್ನು ಕಳೆಯಬಹುದು. ಸಮಯವಿದ್ದರೆ ಸಮೀಪದಲ್ಲೇ ಇರುವ ಮಾವ್ಲಿನೊಂಗ್ ಗ್ರಾಮಕ್ಕೆ ಭೇಟಿ ನೀಡಬಹುದು. ಅದು ಏಷ್ಯಾದಲ್ಲೇ ಅತ್ಯಂತ ಸ್ವಚ್ಛ ಗ್ರಾಮವೆಂದು ಘೋಷಿಸಲ್ಪಟ್ಟಿದೆ. ಜೀವಂತ ಬಳ್ಳಿಗಳಿಂದ ನದಿಗಳಿಗೆ ರಚಿಸಲಾದ ಸೇತುವೆಗಳನ್ನು ಅಲ್ಲಿ ನೋಡಬಹುದು.

ಕ್ರಾಂಗ್ ಶೂರಿ ಜಲಪಾತವು ನನ್ನ ಮೇಘಾಲಯ ಪ್ರವಾಸದಲ್ಲೇ ಮರೆಯಲಾಗದ ತಾಣವಾಗಿದೆ. ಪ್ರಕೃತಿಯ ಮಡಿಲೆಂದೇ ಈಶಾನ್ಯ ರಾಜ್ಯಗಳು ಹೆಸರುವಾಸಿ. ಉನ್ನತ ಮಟ್ಟದ ಮೂಲಭೂತ ಸೌಲಭ್ಯಗಳು ಲಭ್ಯವಿಲ್ಲದಿದ್ದರೂ ಪ್ರಕೃತಿಯನ್ನು ಪ್ರೀತಿಸುವವರಿಗೆ ಮೇಘಾಲಯ ಸ್ವರ್ಗದಂತೆ ಗೋಚರಿಸುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**

